ಅಸಲು ದಾವಾ ನಂಃ 23/2022
ಪಿಡಬ್ಲ್ಯುಃ1

<u>ದಿನಾಂಕಃ **26-09-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ **1** ರಿಂದ **4** ರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>

ವಾದಿ ಗೃಹಿಣಿ ಕೆಲಸ ಮಾಡುತ್ತಿದ್ದರು. ವಾದಿಗೆ ವೈಯಕ್ತಿಕವಾಗಿ ಏನು ಆದಾಯ ಇತ್ತು ಎಂದರೆ ಸಾಕ್ಷಿ ಅವರ ಗಂಡನ ಮನೆ ಕೋರಮಂಗಲದಲ್ಲಿ ಇದ್ದು ಅದನ್ನು ಮಾರಾಟ ಮಾಡಿ ಅವರ ಬಳಿ ಹಣ ಇತ್ತು ಎಂದು ಉತ್ತರಿಸುತ್ತಾರೆ. ಸದರಿ ಮನೆಯನ್ನು 2015 ನೇ ಸಾಲಿನಲ್ಲಿ ಮಾರಾಟ ಮಾಡಿರಬಹುದು. ಸದರಿ ಮನೆ ಮಾರಾಟ ಮಾಡಿದ ಬಗ್ಗೆ ದಾಖಲೆಯನ್ನು ಹಾಜರಪಡಿಸಬಹುದು ಎಂದರೆ ಸರಿ. ನಾನು ರಿಯಲ್ ಎಸ್ಟೇಟ್ ಮಾಡುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಕೈಗಾರಿಕಾ ಉದ್ಯೋಗ ನಡೆಸುತ್ತಾ ಇರುತ್ತೇನೆ ಎಂದು ಉತ್ತರಿಸುತ್ತಾರೆ.

2. ದಿನಾಂಕ 19.07.2018 ರಂದು ಕರಾರು ಪತ್ರ ಆಗುವ ಕಾಲಕ್ಕೆ ನಾನು ವೈಯಕ್ತಿವಾಗಿ ಹಾಜರಿರಲಿಲ್ಲ. ನಾನು ವೈಯಕ್ತಿಕವಾಗಿ ಕರಾರು ಪತ್ರ ಆಗುವ ಕಾಲಕ್ಕೆ ಇರದೇ ಇರುವ ಕಾರಣ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ನಂತರ ನಾನು ಜಿ.ಪಿ.ಎ ಪಡೆದುಕೊಂಡ ನಂತರ ಪರಿಶೀಲನೆ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಕರಾರು ಆಗುವ ಕಾಲಕ್ಕೆ ಆದ ವಿದ್ಯಾಮಾನಗಳ ಬಗ್ಗೆ ವಾದಿಗೆ ವೈಯಕ್ತಿಕವಾಗಿ ಹೇಳಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಂತರ ನಾನು ಪರಿಶೀಲನೆ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಕರಾರು ಪತ್ರ ಆಗುವ ಕಾಲಕ್ಕೆ ನಾನು ಇರದೇ ಇರುವ ಕಾರಣ ನಾನು ಕರಾರು ಪತ್ರದ ಬಗ್ಗೆ ಸಾಕ್ಷ್ಯ ನುಡಿಯಲು ಸಮ್ಮತ ವ್ಯಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರ ಆಗುವ ಕಾಲಕ್ಕೆ ಸದರಿ ಪತ್ರಕ್ಕೆ ಯಾರು ಯಾರು ಸಾಕ್ಷಿದಾರರು ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಂತರ ನಾನು ಕರಾರು ಪತ್ರಕ್ಕೆ ಯಾರು ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂಬುದರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿ. ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದವರನ್ನು ನಮ್ಮ ಪರವಾಗಿ ಸಾಕ್ಷಿ ಮಾಡಿಸಲು ನಾನು ತಿಳಿದುಕೊಂಡು ಹೇಳುತ್ತೇನೆ.

3. ಕರಾರು ಪತ್ರ ಆದ ನಂತರ 3 ನೇ ಪ್ರತಿವಾದಿ ನನ್ನ ಜೊತೆ ಫೋನ್ ಮುಖಾಂತರ ಸಂಭಾಷಣೆ ಮಾಡಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿ ನಮ್ಮ ತಂದೆಗೆ ಹುಷಾರಿಲ್ಲ ಬೇಗ

ಕ್ರಯ ಮಾಡಿಕೊಡುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಪೂರ್ತಿ ಹಣವನ್ನು ಕೊಡುತ್ತೇನೆ ಕ್ರಯ ಪತ್ರ ಮಾಡಿಕೊಳ್ಳುವಂತೆ ಅವರಿಗೆ ಹೇಳಿದ್ದೆ ಎಂದು ಉತ್ತರಿಸುತ್ತಾರೆ. ನನ್ನ ದೂರವಾಣಿ ಸಂಖ್ಯೆ 9845020021 ಎಂದರೆ ಸರಿ. 3 ನೇ ಪ್ರತಿವಾದಿ ನಮ್ಮ ತಂದೆಯ ಆರೋಗ್ಯ ದದಿನದಿಂದ ದಿನಕ್ಕೆ ಸರಿ ಇಲ್ಲದ ಕಾರಣ ನಾನು ಈ ತಿಂಗಳ ಕೊನೆಯವರೆಗೆ ಕಾಯಲು ಆಗುವುದಿಲ್ಲ ಎಂದು ವಾಟ್ಸ್ ಆ್ಯಪ್ ಮೆಸೇಜ್ ಕಳುಹಿಸಿದ್ದರು ಎಂದರೆ ಸರಿ. ನಂತರ ನಾನು ನನ್ನ ತಮ್ಮ ಮಧಸೂದನ್ ಇವರು ಜಮೀನನ್ನು ನೋಡಲು ಬರುತ್ತಾರೆ ಅವರನ್ನು ಸಂಪರ್ಕಿಸುವಂತೆ 3 ನೇ ಪ್ರತಿವಾದಿಗೆ ಹೇಳಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ರೀತಿ ಸಂದೇಶ ಬಂದ ನಂತರ ನಾನು ಮತ್ತು ನನ್ನ ತಮ್ಮ ಬಾಳೆಹೊನ್ನೂರಿನಲ್ಲಿ 3 ನೇ ಪ್ರತಿವಾದಿಗೆ ಉಳಿದ ಹಣವನ್ನು ತೆಗೆದುಕೊಂಡು ಕ್ರಯ ಪತ್ರ ಮಾಡಿಕೊಡುವಂತೆ ಕೇಳಿದಾಗ ಅವರು ಅಗುವುದಿಲ್ಲ ಹೆಚ್ಚಿನ ಹಣ ಬೇಕು ಎಂದು ಕೇಳಿದ್ದರು ಎಂದು ಉತ್ತರಿಸುತ್ತಾರೆ. ನಾನು 3 ನೇ ಪ್ರತಿವಾದಿ ಕಳುಹಿಸಿದ ಸಂದೇಶಕ್ಕೆ ಆದಷ್ಟು ಬೇಗ ನಾನು ಮಾಡಿಸಿಕೊಳ್ಳುತ್ತೇನೆ ಎಂದು ಸಂದೇಶ ಕಳುಹಿಸಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೇ ತಿಂಗಳಲ್ಲಿ ಅವರ ಮನೆಗೆ ಹೋಗಿ ಖುದ್ದಾಗಿ ಕ್ರಯ ಪತ್ರ ಮಾಡಿಕೊಡುವಂತೆ ಕೇಳಿದ್ದೆ ಎಂದು ಉತ್ತರಿಸುತ್ತಾರೆ. ನಾನು ಅವರ ಮನೆಗೆ ಹೋಗಿ ಕೇಳಿದ ಸಂರ್ದಭದಲ್ಲಿ ನಾನು ವಾದಿಯ ಪರ ಜಿ ಪಿ ಎ ಹೊಂದಿರುವ ಬಗ್ಗೆ ಅವರಿಗೆ ಮಾಹಿತಿ ಕೊಟ್ಟಿರುವುದಿಲ್ಲ ಮತ್ತು ಆ ಕಾಲಕ್ಕೆ ನಾನು ವಾದಿಯಿಂದ ಜಿ.ಪಿ.ಎ.ಯನ್ನು ಪಡೆದುಕೊಂಡಿರಲಿಲ್ಲ.

4. ನಿಪಿ-2 ರಲ್ಲಿ ನಮೂದಿಸಿದ ವಿಳಾಸದಲ್ಲಿ ವಾದಿ ವಾಸ ಇದ್ದರು ಎಂದರೆ ಸರಿ. ದಿನಾಂಕ 12.02.2022 ರಂದು ನಿಪಿ- 2 ರಲ್ಲಿ ನಮೂದಿಸಿದ ವಿಳಾಸಕ್ಕೆ 3 ನೇ ಪ್ರತಿವಾದಿ ಸಾಕ್ಷಿ 2019 ರ ನಂತರ ತಮ್ಮ ಮಗನ ಚಿಕಿತ್ಸೆಗಾಗಿ ವಾದಿ ಬೆಂಗಳೂರಿನ ರಾಜಾರಾಜೇಶ್ವರಿ ನಗರದಲ್ಲಿ ವಾಸ ಇದ್ದರು ಎಂದು ಉತ್ತರಿಸುತ್ತಾರೆ. ಸದರಿ ನೋಟೀಸು ಪ್ರತಿಯನ್ನು ಬೆಂಗಳೂರಿನ ರಾಜಾರಾಜೇಶ್ವರಿ ನಗರದ ವಿಳಾಸಕ್ಕೆ ನೋಟೀಸು ಕಳುಹಿಸಲಾಗಿತ್ತು ಎಂದರೆ ಸಾಕ್ಷಿ 2019 ರಿಂದ ನಾನು 2020 ರ ಮಾರ್ಚ್ ತಿಂಗಳ ವರೆಗೆ ಆ ವಿಳಾಸದಲ್ಲಿ ವಾಸ ಇದ್ದರು ಆ ನಂತರ ಆ ವಿಳಾಸದಲ್ಲಿ ಅವರ ಸೊಸೆ ಮತ್ತು ಇಬ್ಬರು ಮಕ್ಕಳು ವಾಸ ಇದ್ದರು ಎಂದು ಉತ್ತರಿಸುತ್ತಾರೆ. ಸದರಿ ನೋಟೀಸನ್ನು ಅನ್ ಕ್ಲೈಮಡ್ ಎಂದು ವಾಪಸ್ಸು 3 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಅಲ್ಲಿ ಯಾರು ವಾಸ ಇರಲಿಲ್ಲ ಎಂದು

ಉತ್ತರಿಸುತ್ತಾರೆ. ಮಾಹಿತಿಯನ್ನು ತಿಳಿಸಿದಾಗ ಸದರಿ ದಾಖಲೆಯನ್ನು ಪಡೆದುಕೊಳ್ಳದೇ ಇದ್ದಾಗ ಅನ್ ಕ್ಲೈಮಡ್ ಎಂದು ನಮೂದು ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

5. ದಿನಾಂಕ 12.02.2022 ರ ನೋಟೀಸಿನಲ್ಲಿ 3 ನೇ ಪ್ರತಿವಾದಿ ಬೇಗ ಕ್ರಯ ಪತ್ರ ಮಾಡಿಕೊಳ್ಳದಿದ್ದರೆ ಮುಂಗಡ ಹಣವನ್ನು ಮುಟ್ಟುಗೋಲು ಹಾಕುವುದಾಗಿ ನಮೂಸಿದ್ದರು ಎಂದರೆ ಸರಿ. ದಿನಾಂಕ 19.05.2022 ರಂದು ವಾದಿ ತಮ್ಮ ವಕೀಲರ ಮುಖಾಂತರ ನೋಟೀಸು ಕಳುಹಿಸಿರುತ್ತಾರೆ ಎಂದರೆ ಸರಿ. ಸದರಿ ನೋಟೀಸಿನಲ್ಲಿ ವಾದಿ ತಮ್ಮ ವಿಳಾಸದ ಬಗ್ಗೆ ಬರೆದಿರುತ್ತಾರೆ ಎಂದರೆ ಸರಿ. ಸದರಿ ವಾದಿ ನೀಡಿದ ವಿಳಾಸಕ್ಕೆ ದಿನಾಂಕ 04.06.2022 ರಂದು ಪ್ರತಿವಾದಿಯರು ತಮ್ಮ ವಕೀಲರ ಮುಖಾಂತರ ಪ್ರತ್ಯುತ್ತರ ನೋಟೀಸು ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ಕಳುಹಿಸಿರಬಹುದು ಆದರೆ ನಮಗೆ ಬಂದಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯರು ವಾದಿ ಕಳುಹಿಸಿದ ನೋಟೀಸಿನ ವಿಳಾಸಕ್ಕೆ ಪ್ರತ್ಯುತ್ತರ ನೋಟೀಸು ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸು No such address ಎಂದು ವಾಪಸ್ಸು ಬಂದಿರುತ್ತದೆ ಎಂದರೆ ಸರಿ. ವಾದಿ ಕಳುಹಿಸಿದ ನೋಟೀಸಿನಲ್ಲಿ ತಮ್ಮ ವಿಳಾಸ ಸರಿಯಾಗಿ ಇರುತ್ತದೆ. ವಾದಿ ಪ್ರತಿವಾದಿಯರು ಕಳುಹಿಸಿದ ನೋಟೀಸನ್ನು ಉದ್ದೇಶ ಪೂರ್ವಕವಾಗಿ ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ.

6. ದಾವಾ ಆಸ್ತಿಯ ಪಹಣಿ ಷತ್ರಿಕೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ನಮ್ಮ ವಕೀಲರು ನೋಡಿರುತ್ತಾರೆ ನಾನು ನೋಡಿರುವುದಿಲ್ಲ. ನಿಪಿ- 28 ರಲ್ಲಿ ಎಂ ಆರ್ ಸಂಖ್ಯೆ T7/2018-19 ವಿಭಜನೆ ಮುಖಾಂತರ ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ಪೋಡಾಗಿ ನೋಂದಣಿಸಿದ್ದವರ ಆಸ್ತಿಗೆ ಈ ರೀತಿ ನಮೂದು ಇರುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ವಿಭಜನೆ ಮಾಡಿಕೊಂಡು ಕ್ರಯ ಪತ್ರ ನೋಂದಣಿ ಮಾಡಿಸಿಕೊಳ್ಳಲು ಸಿದ್ದರಿದ್ದರು ಎಂದರೆ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ. ನಿಪಿ- 29 ರಲ್ಲಿ ಎಂ ಆರ್ ಸಂಖ್ಯೆ T2/2018-19 ವಿಭಜನೆ ಮುಖಾಂತರ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ- 33 ರಲ್ಲಿ ಎಂ ಆರ್ ಸಂಖ್ಯೆ T2/2018-19 ವಿಭಜನೆ ಮುಖಾಂತರ ಎಂದು ನಮೂದು ಇರುತ್ತದೆ ಎಂದರೆ ಸರಿ. ಉಳಿದಂತ ಆಸ್ತಿಗಳನ್ನು ಪ್ರತಿವಾದಿಯರು ಪೋಡು ಮಾಡಿ ನೋಂದಣಿ ಸಿದ್ದಮಾಡಿ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿ ಇರಬಹುದು

ಎಂದು ಉತ್ತರಿಸುತ್ತಾರೆ. ಈ ರೀತಿ ಕ್ರಯ ಪತ್ರ ಮಾಡಿಕೊಳ್ಳಲು ಸಿದ್ಧರಿರುವ ಬಗ್ಗೆ ಪ್ರತಿವಾದಿಯರು ವಾದಿಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರು ಕ್ರಯ ಪತ್ರಮಾಡಿಕೊಳ್ಳಲು ಅದಕ್ಕೆ ಬೇಕಾದ ದಾಖಲೆಯನ್ನು ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ.

7. ಪ್ರತಿವಾದಿಯರು ಬ್ಯಾಂಕಿನಲ್ಲಿ ಮಾಡಿದ ಸಾಲವನ್ನು ಆದಾರ ಖುಲಾಸೆ ಪತ್ರ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಮಾಡಿರಬಹುದು ಆದರೆ ಸದರಿ ವಿಚಾರ ನಮಗೆ ತಿಳಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಆದಾರ ಖುಲಾಸೆ ಪತ್ರ ಮಾಡಿಕೊಳ್ಳುವ ವಿಚಾರ ಪ್ರತಿವಾದಿಯರು ವಾದಿಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಯಾರು ಯಾರಿಗೆ ಮುಂಗಡ ಹಣವನ್ನು ಪಾವತಿ ಮಾಡಿರುವ ಬಗ್ಗೆ ನಮುಾದು ಮಾಡಿರುತ್ತೇವೆ. ನಾನು ಹಾಜರುಪಡಿಸಿರುವ ಪಾಸ್ ಬುಕ್ ವಾದಿಗೆ ಸಂಬಂಧಿಸಿದ್ದು ಇರುವುದಿಲ್ಲ ಎಂದರೆ ಸಾಕ್ಷಿ ಅವರ ಮಗನಿಗೆ ಸಂಬಂಧಿಸಿದ ಪಾಸ್ ಪುಸ್ತಕ ಇರುತ್ತದೆ ಎಂದು ಉತ್ತರಿಸುತ್ತಾರೆ. ಷರಾದಲ್ಲಿ ವಾದಿ ಮಗನ ಖಾತೆಯಿಂದ ಹಣ ವರ್ಗಾವಣೆಯಾಗಿರುವ ಬಗ್ಗೆ ನಮೂದು ಇರುವುದಿಲ್ಲ ಆದರೆ ಚೆಕ್ ಮುಖಾಂತರ ಕೊಟ್ಟ ಬಗ್ಗೆ ನಮೂದು ಇರುತ್ತದೆ ಎಂದು ಉತ್ತರಿಸುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ರೂ. 88 ಲಕ್ಷ ಹಣವನ್ನು ಕಿರಣ್ ಇವರ ಖಾತೆಯಿಂದ ಪ್ರತಿವಾದಿಯರಿಗೆ ಕೊಟ್ಟ ಬಗ್ಗೆ ಹೇಳಿರುವುದಿಲ್ಲ ಆದರೆ ಖಾತೆ ಬಗ್ಗೆ ನಮೂದು ಇರುತ್ತದೆ ಎಂದು ಉತ್ತರಿಸುತ್ತಾರೆ.

8. ದಿನಾಂಕ 19.07.2018 ರ ಕರಾರು ಪತ್ರದಲ್ಲಿ ಕಿರಣ್ ದ್ರುವ ಇವರು ಪಕ್ಷಗಾರರು ಇರಲಿಲ್ಲ ಎಂದರೆ ಸರಿ. ಅದೇ ರೀತಿ ಅವರ ಖಾತೆಯಿಂದ ಹಣ ವರ್ಗಾವಣೆ ಮಾಡುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಕಿರಣ್ ದ್ರುವ ಇವರು ಗಿರಿಜಾ ದ್ರುವ ಇವರ ಜಿ.ಪಿ.ಎ ಇದ್ದರು ಎಂಬ ಬಗ್ಗೆ ನಾನು ದಾಖಲೆಯನ್ನು ನೋಡಿ ಹೇಳಬೇಕು. ನಿಪಿ- 1 ರಲ್ಲಿ ನಾನು ಜಿ ಪಿ ಎ ಅಂಗೀಕರಿಸಿದ ಬಗ್ಗೆ ಸಹಿ ಮಾಡಿರುತ್ತೇನೆ. ದಿನಾಂಕ 19.07.2018 ರಂದು ಷರಾ ಬರೆದಿದ್ದು ಅದರಲ್ಲಿ ಖಾಲಿ ಇದ್ದು ಆದರೆ ಸಹಿ ಇರುತ್ತದೆ. ಸದರಿ ಷರಾ incomplete ದಾಖಲೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ- 5 ರಲ್ಲಿ ಹಿಂಬರಹದಲ್ಲಿ ಕೊಳ್ಳುವವರ ಸಹಿ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ- 6 ರಲ್ಲಿ ಸಾಕ್ಷಿ ಸಹಿ ಮತ್ತು purchaser ಸಹಿ ಖಾಲಿ ಇರುತ್ತದೆ ಎಂದರೆ ಸರಿ. ಹಣ ಪಡೆದುಕೊಂಡವರು ಸಹಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಅದೇ ರೀತಿ ನಿಪಿ- 7 ರಲ್ಲಿ

ಸಾಕ್ಷಿ ಸಹಿ ಮತ್ತು purchaser ಸಹಿ ಖಾಲಿ ಇರುತ್ತದೆ ಎಂದರೆ ಸರಿ. ಹಣ ಪಡೆದುಕೊಂಡವರು ಸಹಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯರು ನಮಗೆ ಯಾವುದೇ ಷರಾವನ್ನು ಬರೆದುಕೊಟ್ಟಿರುವುದಿಲ್ಲ ಈ ದಾವೆಗೋಸ್ಕರ ನಾನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

9. ನಾನು ವಾದ ಪತ್ರದಲ್ಲಿ ಹೇಳಿದ ಮುಂಗಡ ಹಣವನ್ನು ಪ್ರತಿವಾದಿಯರು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಫೆಬ್ರವರಿ 2022 ರಿಂದ ಪ್ರತಿವಾದಿಯರು ತಾವು ಕ್ರಯ ಪತ್ರ ಬರೆದುಕೊಡಲು ಸಿದ್ದರಿರುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಕಾಲ ಪರಿಮಿತಿ ಅವಧಿಯಲ್ಲಿ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ದಾವೆಗೋಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವ ಸಲುವಾಗಿ ದಾವೆ ಹೂಡುವ ಪೂರ್ವದಲ್ಲಿ ನೋಟೀಸು ನೀಡಿ ಮುಟ್ಟುಗೋಲು ಹಾಕಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಪ್ರತಿವಾದಿ 5 ಮತ್ತು 6 ರ ಪರ ವಕೀಲರು ಪ್ರತಿವಾದಿ 1 ರಿಂದ 4 ರವರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ